ಚಾಮರಾಜಪೇಟೆಯಲ್ಲಿರುವ ಗ್ರೈನ್ ಮರ್ಚೆಂಟ್ಸ್ ಸಹಕಾರ ಬ್ಯಾಂಕ್ ನಿಯಮಿತ

೧೬೫೫. ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲು).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಗ್ರೈನ್ ಮರ್ಚೆಂಟ್ಸ್ ಸಹಕಾರ ಬ್ಯಾಂಕ್ ನಿಯಮಿತ, ಒಂದು ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಅದು ಎಂದಿನಿಂದ ಅಸ್ತಿತ್ವದಲ್ಲಿದೆ ? ಹಾಗೂ ಆ ಬ್ಯಾಂಕು ಹೊಂದಿರುವ ಒಟ್ಟು ಶಾಖೆಗಳು ಎಷ್ಟು ?

ಇ) ಸದರಿ ಬ್ಯಾಂಕಿನಲ್ಲಿರುವ ಶೇರುದಾರರ ಸಂಖ್ಯೆ ಎಷ್ಟು ? ಶೇರುಗಳನ್ನು ಸಾರ್ವಜನಿಕರಿಗೆ ನೀಡಲು ಅನುಸರಿಸುತ್ತಿರುವ ನಿಯಮಗಳೇನು ? ಹಾಗೂ ನಿಯಮಗಳಿಗನುಸಾರವಾಗಿ ಶೇರುಗಳನ್ನು ಕೊಟ್ಟಿರುವರೆ ?

ಈ) ಶೇರುದಾರರುಗಳಿಗೆ ವ್ಯಾಪಾರಕ್ಕಾಗಿ ನೀಡುತ್ತಿರುವ ಸಾಲ ಮಂಜೂರಾತಿಯಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ನಿಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ನಿಜ.

ಆ) ದಿನಾಂಕ ೨೯-೭-೧೯೨೭ರಿಂದ ಅಸ್ತಿತ್ವದಲ್ಲಿದೆ ಹಾಗೂ ಕೇಂದ್ರ ಕಛೇರಿಯು ಶಾಖೆಯೂ ಸೇರಿ ಮೂರು ಶಾಖೆಗಳನ್ನು ಹೊಂದಿದೆ.

ಇ) ದಿನಾಂಕ ೩೧-೩-೧೯೬೫ಕ್ಕೆ ; ಸದಸ್ಯರು ; ೩೪೭೫
ಸಹ ಸದಸ್ಯರು ; ೪೩೧

ಬ್ಯಾಂಕಿನ ಕೋಟ ನಿಯಮ ಹತ್ತು (೧೦) ಮತ್ತು ೧೬ ರನ್ವಯ ಬ್ಯಾಂಕಿನಲ್ಲಿ ಸದಸ್ಯತ್ವ ಹಾಗೂ ಶೇರು ಪಡೆಯುವ ವ್ಯಕ್ತಿಯು—

೧) ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯು ಅಂದರೆ ಬೆಂಗಳೂರು ನಗರ ಪಾಲಿಕೆ ಹಾಗೂ ಬೆಂಗಳೂರು ಪ್ರಾಧಿಕಾರದಲ್ಲಿ ಒಳಪಡುವ ಪ್ರದೇಶಗಳಲ್ಲಿ ವಾಸವಾಗಿರಬೇಕು.

೨) ಪ್ರವೇಶ ಶುಲ್ಕ ರೂ. ೬-೦೦, ಶೇರು ಫೀ ರೂ. ೦-೨೫ ಹಾಗೂ ಕನಿಷ್ಟ ೧ ಶೇರಿನ ಹಣ ಪಾವತಿ ಮಾಡಿರಬೇಕು.

೩) ಕನಿಷ್ಟ ೧ ಶೇರಿನ ಬೆಲೆ ರೂ. ೨೫ನ್ನಾದರೂ ಪಾವತಿ ಮಾಡಿರಬೇಕು. ಕನಿಷ್ಟ ೧೮ ವರ್ಷ ವಯಸ್ಸಿನವರಾಗಿರಬೇಕು.

ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳನ್ವಯ ಅನರ್ಹರಾಗಿರಬಾರದು.

ಆಡಳಿತ ಮಂಡಳಿ ಒಪ್ಪಿಗೆ ಪಡೆದ ನಂತರವೇ ಶೇರುಗಳನ್ನು ಮಂಜೂರು ಮಾಡಬೇಕಾಗಿರುತ್ತದೆ. ಬೈಲಾ ನಿಯಮಗಳಿಗನುಸಾರವಾಗಿ ಕೊಟ್ಟಿರುತ್ತಾರೆ.

ಈ) ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಕೋ—ಆಪರೇಟಿವ್ ಆಕ್ಟ್ ಪ್ರಕಾರ ಮತ್ತು ಅದರ ರೂಲ್ ಪ್ರಕಾರ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಜನರಿಗೆ ಷೇರುದಾರರನ್ನಾಗಿ ಇಲ್ಲಿ ಸೇರಿಸಿಕೊಳ್ಳಬೇಕೆಂಬ ಆದೇಶ ಇಲ್ಲವೆ ? ಅದೇ ರೀತಿ ಪ್ರತಿಯೊಂದು ಸಹಕಾರಿ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ-ವರ್ಗದವರು ಡೈರೆಕ್ಟರ್ ಆಗಬೇಕೆಂಬ ಆದೇಶ ಇಲ್ಲವೆ ? ಈ ಸಂಸ್ಥೆಯಲ್ಲಿ ಒಬ್ಬರಾದರೂ ಪರಿಶಿಷ್ಟ ಜಾತಿಗೆ ಸೇರಿದವರು ಷೇರುದಾರರು ಇದ್ದಾರೆಯೇ ? ಅಲ್ಲಿ ಷೇರುದಾರರೇ ಇಲ್ಲ. ಅಂದರೆ ಡೈರೆಕ್ಟರ್ ಆಗತಕ್ಕಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದರಲ್ಲಿ ೨೩ ಜಾತಿಯವರೇ ಮನಾವಲಿ ಮಾಡಿಕೊಂಡು

ಬೇರೆ ಯಾರನ್ನೂ ಷೇರುದಾರರನ್ನಾಗಿ ಸೇರಿಸಿಕೊಂಡಿಲ್ಲ. ಒಂದು ವೇಳೆ ಷೇರುದಾರರಾಗಬೇಕಾದರೆ ೧೦೦ ರೂಪಾಯಿಗಳು ಷೇರು ಹಣ ಇದ್ದರೆ, ೫.೦೦೦ ರೂಪಾಯಿಗಳವರೆಗೆ ಲಂಚ ತೆಗೆದುಕೊಂಡು ಷೇರನ್ನು ಕೊಟ್ಟಿರುವುದು ನಿಜವಲ್ಲವೆ ?

ಶ್ರೀ ಎಚ್. ವಿಶ್ವಾನಾಥಯ್ಯ.— ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯೇ ಬೇರೆ. ಈಗ ಅವರು ಉಪ ಪ್ರಶ್ನೆ ಕೇಳುತ್ತಿರುವುದೇ ಬೇರೆ. ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಲಾಗುವುದು. ಎರಡನೆಯದಾಗಿ, ಇವತ್ತಿನ ದಿವಸ ಈ ಒಂದು ಸಂಸ್ಥೆಯ ಷೇರು ಬಂಡವಾಳ ೭೧ ಲಕ್ಷ ಇದ್ದು ಅದನ್ನು ೧ ಕೋಟಿ ರೂಪಾಯಿಗಳವರೆಗೆ ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಯಾರು ಸದಸ್ಯರಾಗುವುದಕ್ಕೆ ಇಷ್ಟಪಡುತ್ತಾರೋ ಅಂತಹವರನ್ನು ಖಂಡಿತವಾಗಿ ಸದಸ್ಯರನ್ನಾಗಿ ಸೇರಿಸಿಕೊಳ್ಳುವಂತ ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ. ಸದಸ್ಯರನ್ನಾಗಿ ಮಾಡಿಕೊಳ್ಳದಿರುವ ಬಗ್ಗೆ ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನನಗೆ ಬರೆದು ಕಳುಹಿಸಿದರೆ ಅದರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಅಶ್ವತ್ಥ್ ಎಂಬುವರು ಕಳೆದ ಎರಡೂವರೆ ವರ್ಷಗಳಿಂದ ಷೇರಿಗಾಗಿ ಅರ್ಜಿಯನ್ನು ಹಾಕಿಕೊಂಡು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಅವರು ನಿಮಗೆ ಷೇರು ಕೊಡುವುದಿಲ್ಲವೆಂದು ರೆಫ್ಯೂಸ್ ಮಾಡಿದ್ದಾರೆ. ಇವರಿಗೆ ಷೇರು ಕೊಡದಿರುವುದಕ್ಕೆ ಕಾರಣವೇನು ? ಆಮೇಲೆ ಎಲ್ಲಾ ಸೊಸೈಟಿಗಳು ಹಾಗೂ ಎಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಇದ್ದ ಹಾಗೆ ೬ ವರ್ಷಗಳಿಗೊಮ್ಮೆ ಇಲ್ಲಿಯೂ ಆಡಳಿತ ಮಂಡಳಿಯ ಸದಸ್ಯರು ಬದಲಾಗಬೇಕು. ಅಲ್ಲಿ ಕಳೆದ ೨೦–೩೦ ವರ್ಷಗಳಿಂದ ವೆಂಕಟೇಶಯ್ಯ ಎನ್ನುವವರು ಒಬ್ಬರೇ ಪ್ರೆಸಿಡೆಂಟ್ ಆಗಿದ್ದು ಬೇರೆ ಯಾರೂ ಬರಬಾರದೆಂಬುದಕ್ಕೆ ಅವಕಾಶ ಇಲ್ಲ. ಇದೆಲ್ಲವನ್ನೂ ತಾವು ಎನ್‌ಕ್ವೈರಿ ಮಾಡಿಸುತ್ತೀರಾ ? ಅಲ್ಲಿ ಪ್ರತಿಯೊಂದು ಸಾರಿ ಲೋನ್ ಕೇಳಿದಾಗಲೂ ಕೂಡಾ ೫ ಪರ್ಸೆಂಟ್ ಬ್ಯಾಂಕಿನ ಅಧ್ಯಕ್ಷರಿಗೆ, ಡೈರೆಕ್ಟರಿಗೆ ಲಂಚ ಕೊಡಬೇಕಾಗಿದೆ.

ಶ್ರೀ ಎಚ್. ವಿಶ್ವನಾಥಯ್ಯ.— ಸನ್ಮಾನ್ಯ ಸದಸ್ಯರು ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಇಲ್ಲಿ ಹೇಳಿದ್ದಾರೆ. ಖಂಡಿತವಾಗಿ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಉಳಿದ ಆರೋಪ ಎಂದು ಏನು ಹೇಳುತ್ತಾರೋ ಆ ಬಗ್ಗೆ ಹೇಳುವುದಾದರೆ ಈಗಿರತಕ್ಕ ಕಾನೂನು ಪ್ರಕಾರ ಅವರು ಅರ್ಹರಿದ್ದಾರೆ. ಕಾನೂನು ಪ್ರಕಾರ ಅವರು ಆಲ್ಲಿರಲು ಅರ್ಹರು ಇಲ್ಲದಿದ್ದರೆ ಅವರನ್ನು ತೆಗೆದುಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೯೨೭ರಲ್ಲಿ ಪ್ರಾರಂಭವಾದ ಈ ಸೊಸೈಟಿಯಲ್ಲಿ ೩೪೭೫ ಸದಸ್ಯರು ಇದ್ದಾರೆ ಹಾಗೂ ೪೩೧ ಅಸೋಸಿಯೇಟೆಡ್ ಮೆಂಬರ್ಸ್ ಇದ್ದಾರೆ. ಇಷ್ಟು ವರುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿಗೆ ಸೇರಿದವರಿದ್ದಾರೆಂದು ಹೇಳಬೇಕು. ಹಾಗೆ ಸದಸ್ಯರು ಇಲ್ಲದಿದ್ದರೆ ತಮಗೆ ಗೊತ್ತಿರುವ ಹಾಗೆ ಸ್ಪೆಷಲ್ ಡ್ರೈವ್ ಮಾಡಿ ಸರ್ಕಾರದವರೇ ಸಮಾಜ ಕಲ್ಯಾಣ ಇಲಾಖೆ ಮುಖಾಂತರ ಹಣ ಕೊಟ್ಟು ಬೇರೆ ಬೇರೆ ಸಂಸ್ಥೆಗಳಿಗೆ ಇವರನ್ನು ಸದಸ್ಯರನ್ನಾಗಿ ಮಾಡಿಸುವ ರೀತಿಯಲ್ಲಿ ಇಲ್ಲೂ ಏಕೆ ಸದಸ್ಯರನ್ನಾಗಿ ಮಾಡುವ ವ್ಯವಸ್ಥೆ ಮಾಡಬಾರದು ? ೧೯೨೭ರಿಂದ ಹಲವಾರು ವರ್ಷ ಒಬ್ಬರೇ ಅಧ್ಯಕ್ಷರು ಇದ್ದರು. ಆ ನಂತರ ಒಬ್ಬರು ಮಾತ್ರ ಜೇಂಜ್ ಆಗಿದ್ದಾರೆ, ಇದನ್ನೆಲ್ಲಾ ತಾವು ಎನ್‌ಕ್ವೈರಿ ಮಾಡಿ ಸೂಕ್ತ ನ್ಯಾಯ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಇದು ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಆಗಿರುವುದರಿಂದ ಪರಿಶಿಷ್ಟ ಜಾತಿ ಪಂಗಡದವರಿಗೆ ಶೇರ್ ರೂಪದಲ್ಲಿ ಹಣದ ಸಹಾಯ ಕೊಟ್ಟು ಸದಸ್ಯರನ್ನು ಮಾಡುವ ಸ್ಥಿತಿಯಲ್ಲಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ. ೧೯೨೭ರಿಂದ ಅಧ್ಯಕ್ಷರಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅದು ಸರಿಯಲ್ಲ. ಕಾನೂನು ಹಾಗೂ ನನಗೆ ತಿಳಿದ ಮಾಹಿತಿಪ್ರಕಾರ ೬ ವರ್ಷಗಳಿಗಿಂತಾ ಹೆಚ್ಚು ಸತತವಾಗಿ ಇರುವುದಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ ಅವರು ಹೇಳಿದ ಹಾಗೆ ಹೆಚ್ಚು ಕಾಲ ಇದ್ದರೆ ಕಾನೂನು ಪ್ರಕಾರ ಅಲ್ಲಿಂದ ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು.